**- -** ಸಿ.ಸಿ. ನಂ. **388/2018.** ಸಿ ಡಬ್ಲೂ **1** ಪಿ ಡಬ್ಲೂ **1**

ದಿ: 12-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಆರೋಪಿತರ ಪರ ಶ್ರೀ ಎಮ್ ಎಮ್ ವಕೀಲರಿಂದ:**

1. ಹನುಮವ್ವ ಗಂಡ ಬಾಲಪ್ಪ ಎಂದರೆ ನನ್ನ ತಾಯಿ. ನಿ ಪಿ 7 ರಂತೆ ಹನುಮವ್ವ ಗಂಡ ಬಾಲಪ್ಪ ಇವರ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎಂದರೆ ಸಾಕ್ಷಿಯು ಅವರು

ಯಾವುದೇ ಪ್ರಮಾಣ ಪತ್ರ ಬರೆದುಕೊಟ್ಟಿಲ್ಲ ಎನ್ನುತ್ತಾರೆ. ನಿ ಪಿ 7 ನ್ನು ಯಾರು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಾನೇ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹೊಲದ ಸಲುವಾಗಿ ನನ್ನ ತಾಯಿಯವರು ನಿ ಪಿ 7 ರಂತೆ ಪ್ರಮಾಣ ಪತ್ರ ಬರೆದುಕೊಟ್ಟಿರುತ್ತಾರೆ. ಶಿವರಾಯ ತಂದೆ ಭೀಮಣ್ಣ ಇವರು ಯಾರು ಎಂದು ನನಗೆ ಗೊತ್ತಿಲ್ಲ. ಶಿವರಾಯ ತಂದೆ ಭೀಮಣ್ಣ ನಿಮ್ಮ ತಂದೆ ಬಾಲಪ್ಪ ತಂದೆ ಹನುಮಗೌಡ ಮತ್ತು 1ನೇ ಆರೋಪಿಯ ತಂದೆ ಭೀಮಯ್ಯ ಇವರು 2ನೇ ಅಣ್ಣ ತಮ್ಮಂದಿರಾಗಬೇಕು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರು 2ನೇ ಅಣ್ಣ ತಮ್ಮಂದಿರು ಆಗಬೇಕು ಎಂದು ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

2. ಸುಣ್ಣದಕಲ್ ಗ್ರಾಮದ ಸ ನಂ 12, ವಿಸ್ತೀರ್ಣ 16 ಎಕರೆ 07 ಗುಂಟೆಗೆ ಶಿವರಾಯ ನಿಮ್ಮ ತಂದೆ ಬಾಲಪ್ಪ ಮತ್ತು 1ನೇ ಆರೋಪಿಯ ತಂದೆ ಭೀಮಯ್ಯ 3 ಜನ ಭಾಗಸ್ಥರು ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ಶಿವರಾಯ ತಂದೆ ಭೀಮಣ್ಣನಿಗೆ 08 ಎಕರೆ 08 ಗುಂಅಎ ಜಮೀನು ಭಾಗ ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 1ನೇ ಆರೋಪಿಯ ತಂದೆ ಭೀಮಯ್ಯನಿಗೆ 2 ಎಕರೆ 24 ಗುಂಟೆ ಜಮೀನು ಭಾಗ ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆಗೆ 05 ಎಕರೆ 15 ಗುಂಟೆ ಜಮೀನು ಭಾಗ ಇದೆ ಎಂದರೆ ಸಾಕ್ಷಿಯು ಇಲ್ಲ ಒಟ್ಟು ಜಮೀನು ನನ್ನ ತಂದೆಗೆ ಸೇರಿದೆ ಎನ್ನುತ್ತಾರೆ. ಶಿವರಾಯನ ಮಕ್ಕಳು, ಮಲಕಪ್ಪ, ತಿಮ್ಮಪ್ಪ, ಸಿದ್ದಪ್ಪ ಇವರು ಯಾರು ಎಂದು ನನಗೆ ಗೊತ್ತಿಲ್ಲ. ಶಿವರಾಯನ ಮಕ್ಕಳು ತಮ್ಮ ತಂದೆಗೆ ಭಾಗದಲ್ಲಿ ಬಂದಿದ್ದ 08 ಎಕರೆ 08 ಗುಂಟೆ ಜಮೀನನನ್ನು 1ನೇ ಆರೋಪಿಗೆ ಮಾರಾಟ ಮಾಡಿ ಸುರಪುರ ತಾಲೂಕಿನ ಬಿಜೇಸಪುರ ದಲ್ಲಿ ವಾಸ ಮಾಡಿಕೊಂಡಿದ್ದಾರೆಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈ ಎಲ್ಲಾ ವಿಷಯ ನಿಮಗೆ ಗೊತ್ತಿದ್ದರೂ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಸ ನಂ 12 ರಲ್ಲಿ ಅವರು

ಖರೀದಿ ಮಾಡಿದ 08 ಎಕರೆ 08 ಗುಂಟೆ ಮತ್ತು ಅವರ ಭಾಗಕ್ಕೆ ಬಂದಿದ್ದ 02 ಎಕರೆ 24 ಗುಂಟೆ ಒಟ್ಟು ಸೇರಿ 10 ಎಕರೆ 32 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 1ನೇ ಆರೋಪಿ ನಿಮ್ಮ ತಾಯಿಯ ಒಪ್ಪಿಗೆಯನ್ನು ಪಡೆದುಕೊಂಡು ನಿಮ್ಮ ಹೆಸರಿಗೆ 05 ಎಕರೆ 15 ಗುಂಟೆ ಜಮೀನು ಮುಟೇಶನ್ ಆಗಿ ಉಳಿದ ಜಮೀನು ಆತನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಮುಟೆಶನ್ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾಯಿ ಒಪ್ಪಿಗೆ ಕೊಟ್ಟಿಲ್ಲ ಎನ್ನುತ್ತಾರೆ.

3. ಈ ಪ್ರಕರಣ ದಾಖಲು ಮಾಡುವ ಕಾಲಕ್ಕೆ ನನ್ನ ತಾಯಿ ಜೀವಂತ ಇದ್ದಳು. ಈ ಕೇಸ್ ನಲ್ಲಿ ನಿಮ್ಮ ತಾಯಿಯ ಹೇಳಿಕೆಯನ್ನು ಪೋಲಿಸರು ಪಡೆದುಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ಪಡೆದುಕೊಂಡ ಮೇಲೆ ಪ್ರಕರಣ ದಾಖಲಾಗಿದೆ ಎನ್ನುತ್ತಾರೆ. ನಿ ಪಿ 7 ರ ಪ್ರಮಾಣ ಪತ್ರ ದಲ್ಲಿ ನಿಮ್ಮ ತಾಯಿಯ ಹೆಬ್ಬೆಟ್ಟು ಸಹಿ ಬಿಟ್ಟು ಪೋಲಿಸರು ಮತ್ತೆ ಅವರ ಹೆಬ್ಬೆಟ್ಟು ಸಹಿಯನ್ನು ಯಾವುದಾದರೂ ದಾಖಲೆಗೆ ಪಡೆದಿದ್ದಾರೆಯೇ ಎಂದರೆ ಪಡೆದಿದ್ದಾರೆ ಎನ್ನುತ್ತಾರೆ. ನಾನು ಟೈಪ್ ಮಾಡಿಸಿದ ದಾಖಲೆಯ ಮೇಲೆ ನನ್ನ ತಾಯಿ ಹೆಬ್ಬೆಟ್ಟಿನ ಸಹಿಯನ್ನು ಪಡೆದು ಪೋಲಿಸ್ ಠಾಣೆಗೆ ಕೊಟ್ಟಿರುತ್ತೇನೆ. ನನ್ನ ತಾಯಿಯ 3-4 ಹೆಬ್ಬೆಟ್ಟಿನ ಸಹಿಗಳನ್ನು ಬೇರೆ ಬೇರೆ ಬರೆದ ಹಾಳೆಗಳ ಮೇಲೆ ಮಾಡಿಸಿಕೊಂಡು ಪೋಲಿಸ್ ಠಾಣೆಗೆ ಕೊಟ್ಟಿರುತ್ತೇನೆ. ಪೋಲಿಸರು ಪರೀಕ್ಷೆಗೆ ಕಳುಹಿಸುವ ಸಲುವಾಗಿ ನಿಮ್ಮ ತಾಯಿಯ ಹೆಬ್ಬೆಟ್ಟಿನ ಸಹಿಯ ದಾಖಲೆ ಪಡೆದಿಲ್ಲ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಮುಟೇಶನ್ ಗೆ ನಿಮ್ಮ ತಾಯಿ ಒಪ್ಪಿಗೆ ಕೊಟ್ಟಿದ್ದರೂ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಜೀವಂತ ಇದ್ದಾಗ ಆಕೆ ಒಪ್ಪಿಗೆ ಕೊಟ್ಟಿರುವ ವಿಚಾರದ ಬಗ್ಗೆ ಸುಮ್ಮನಿದ್ದು ಅವರು ತೀರಿಕೊಂಡ ನಂತರ ಒಪ್ಪಿಗೆ ಕೊಟ್ಟಿಲ್ಲ ಎಂದು ಮುಚ್ಚಿಟ್ಟು ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ. ವಿವಾದಿತ

ಜಮೀನಿನ ಸಂಬಂಧ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ್ 155/2016 ರಂತೆ ದಾವೆ ವಿಚಾರಣೆ ನಡೆದಿದೆ ಎಂದರೆ ಸರಿ. ಆರೋಪಿತರ ಹೊಲ ಕಬಳಿಸಬೇಕೆಂಬ ಉದ್ದೇಶದಿಂದ ಅವರ ಮೇಲೆ ಕೇಸ್ ಮಾಡಿದರೆ ಅವರು ಅಂಜಿ ವಾಪಸ್ ಕೊಡುತ್ತಾರೆಂದು ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನ ಈವು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ